ಓ ಎಸ್ಃ 365/2020

ಪಿ ಡಬ್ಲ್ಯೂ ಃ 1

ದಿನಾಂಕಃ 23.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಎಸ್ ಎಸ್ ವಕೀಲರಿಂದಃ**

ನನಗೆ ಪ್ರತಿವಾದಿ 8 ರಿಂದ 12 ರವರು ಪಕ್ಷಗಾರರಾಗಿರುವುದು ಗೊತ್ತಿರುತ್ತದೆ. ಅವರು ಏನು ತಕರಾರು ಹಾಕಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಅವರು ಹಾಕಿರುವ ಲಿಖಿತ ಹೇಳಿಕೆಯನ್ನು ನಮ್ಮ ವಕೀಲರ ಕಡೆಯಿಂದ ನಾನು ಓದಿಸಿ ತಿಳಿದುಕೊಂಡಿರುವುದಿಲ್ಲ. ಅವರು ಸ.ನಂ. 2/ಎ 1 ರ ಮೇಲೆ ಈ ದಾವೆಯಲ್ಲಿ ತಕರಾರು ಮಾಡಿರುತ್ತಾರೆ. ಸದರಿ ಸ.ನಂ. 2 /ಎ 1 ರಲ್ಲಿ 12 ಗುಂಟೆ ಜಮೀನಿರುತ್ತದೆ. ಸದರಿ 12 ಗುಂಟೆ ಜಮೀನಿನ ಬಗ್ಗೆ ನಾನು ನನ್ನ ತಾತನ ಹೆಸರಿನಲ್ಲಿ ಇರುವ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನಾನು ಸದರಿ ಸ.ನಂ. 2/ಎ 1 ಕ್ಕೆ ಸಂಬಂದಪಟ್ಟಂತೆ ನನ್ನ ತಾತನ ಹೆಸರಿನಲ್ಲಿ ಇರುವ ನೊಂದಾಯಿತ ದಾಖಲಾತಿಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಯಾವ ವರ್ಷ ನನ್ನ ತಾತನ ಹೆಸರಿನಲ್ಲಿ ನೋಂದಾಯಿತ ದಾಖಲಾತಿ ಆಗಿರುತ್ತದೆ ಎಂದರೆ 1941 ರಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಾತನಿಗೆ ವೆಂಕಟಮ್ಮ ರವರು ಸದರಿ ದಾಖಲಾತಿಯನ್ನು ಬರೆದುಕೊಟ್ಟಿರುತ್ತಾರೆ. ವೆಂಕಟಮ್ಮ ನವರಿಗೆ ನನ್ನ ತಾತನಿಗೆ ಬರೆದುಕೊಡಲು ಹಕ್ಕು ಇತ್ತು ಎಂದು ತೋರಿಸಲು ನಾನು ಮೂಲ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ವೆಂಕಟಮ್ಮ ನವರ ಹೆಸರಿನಲ್ಲಿ ದಾವಾ ಐಟಂ ನಂಬರ್ 14 ರಲ್ಲಿ ಕಂದಾಯ ದಾಖಲಾತಿಗಳು ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ.

ಮುದ್ದಯ್ಯನ ಹೆಸರಿನಲ್ಲಿ ಕ್ರಯಪತ್ರವಾಗಿರುವ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿ ಕೊಟ್ಟಿರುತ್ತೇನೋ ಇಲ್ಲವೋ ಗೊತ್ತಿಲ್ಲ.ಮುದ್ದಯ್ಯ ನ ಹೆಸರಿನಲ್ಲಿ ಇದ್ದ ಕಂದಾಯ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನಾನೇ ನಮ್ಮ ವಕೀಲರಿಗೆ ದಾವೆ ಹೂಡುವ ಮುಂಚೆ ದಾಖಲಾತಿಗಳನ್ನು ಖುದ್ದಾಗಿ ಪರಿಶೀಲನೆ ಮಾಡಿ ನೀಡಿರುತ್ತೇನೆ. ನಾನು ನೀಡಿರುವ ದಾಖಲಾತಿಗಳಲ್ಲಿ ಮುದ್ದಯ್ಯ ನ ಹೆಸರಿಗೆ ಆಗಿರುವ ದಾಖಲಾತಿಗಳನ್ನು ನನಗೆ ನೋಡಿ ಹೇಳಲಾಗುವುದಿಲ್ಲ. ಪ್ರತಿವಾದಿ 8 ರಿಂದ 12 ರವರು ದಾವಾ ಐಟಂ ನಂಬರ 14 ಅವರಿಗೆ ಬರಬೇಕೆಂದು ಈ ದಾವೆಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿ 8 ರಿಂದ 12 ರವರು ಯಾವ ಆಧಾರದ ಮೇಲೆ ಅವರಿಗೆ ದಾವಾ ಸ್ವತ್ತು ಬರಬೇಕೆಂದು ಕೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿ 8 ರಿಂದ 12 ರವರು ತಕರಾರು ಹಾಕಿದ ನಂತರ ನಾನು ದಾವಾ ಐಟಂ ನಂಬರ್ 14 ರ ದಾಖಲಾತಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಪ್ರತಿವಾದಿ 8 ರಿಂದ 12 ರವರ ಹೆಸರಿಗೆ ದಾವಾ ಐಟಂ ನಂಬರ್ 14 ಮೂಲಪುರುಷ ಹೊನ್ನಮಲ್ಲಯ್ಯ ನವರಿಗೆ ಕ್ರಯಪತ್ರದ ಮೂಲಕ ಬಂದಿರುತ್ತದೆ ಎಂದರೆ ಸಾಕ್ಷಿ ನಮ್ಮ ತಾತ ಮುದ್ದಯ್ಯ ನವರಿಗೆ ಸೇರಿದ ಸ್ವತ್ತು ಎಂದು ನುಡಿಯುತ್ತಾರೆ. ದಾವಾಐಟಂ ನಂಬರ್ 14 1949 ರಲ್ಲಿ ಪ್ರತಿವಾದಿ 8 ರಿಂದ 12 ರವರಕುಟುಂಬದ ಮೂಲ ಪುರುಷ ಹೊನ್ನಮಲ್ಲಯ್ಯ ನವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ, ನಾವು 1941 ರಲ್ಲಿ ನಮ್ಮ ತಾತನಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. 1941 ರಲ್ಲಿ ನನ್ನ ತಾತನಿಗೆ ಕ್ರಯವಾಗಿರುವ ಬಗ್ಗೆ ಯಾವುದೇ ದಾಖಲಾತಿಯನ್ನು ನಾನು ನೀಡಿರುವುದಿಲ್ಲ ಎಂದರೆ ನಾನು ಕೊಟ್ಟಿರುತ್ತೇನೆ. ಆ ರೀತಿಯಾದಂತಹ ದಾಖಲಾತಿ ಇರುವುದಿಲ್ಲ, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ದಾಖಲಾತಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ಪ್ರತಿವಾದಿ 8 ರಿಂದ 12 ರವರು ದಾವಾ ಐಟಂ ನಂಬರ್ 14 ರಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಎಲ್ಲರು ಒಟ್ಟಿಗೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. 1941 ರಿಂದ ಕಂದಾಯ ಕಟ್ಟಿರುವ

ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನಮ್ಮ ಕುಟುಂಬಕ್ಕೆ ಐಟಂ ನಂಬರ್ 14 ಸೇರಿರುವುದಕ್ಕೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3 ನೆ ಪ್ರತಿವಾದಿ ನನ್ನಅಣ್ಣನಿಗೆ ಐಟಂ ನಂಬರ್ 14 ಭಾಗದಲ್ಲಿ ಬಂದಿರುತ್ತದೆ. ನನ್ನ ಅಣ್ಣನ ಪಾಲಿಗೆ ಸದರಿ ಸ್ವತ್ತು ಬಂದಿರುತ್ತದೆ ಎಂದು ನಾನು ಯಾವ ದಾಖಲಾತಿಗಳನ್ನು ನೀಡಿರುತ್ತೇನೆ ಎಂದರೆ ದಾಖಲಾತಿಗಳನ್ನು ನೀಡಿರುತ್ತೇನೆ. ನನ್ನ ಅಣ್ಣನಿಗೆ ಭಾಗಪಟ್ಟಿಯಂತೆ ಯಾವಾಗ ಖಾತೆಯಾಗಿತ್ತು ಎಂದರೆ ಸಾಕ್ಷಿ ನನಗೆ ಅವರಿಗೆ ಯಾವಾಗ ಖಾತೆಯಾಗಿತ್ತು ಎಂದು ನನಗೆ ಗೊತ್ತಿಲ್ಲ. ಭಾಗ ಆಗಿದೆ ಎಂದು ಹೇಳಿರುವ ಐಟಂ ನಂಬರ್ 14 ನ್ನು ಪ್ರತಿವಾದಿ 8 ರಿಂದ 12 ರವರು ಎ ಸಿ ರವರ ಮುಂದೆ ಖಾತೆಯಾಗಿರುವ ವಿಚಾರ ಪ್ರಶ್ನೆ ಮಾಡಿದ್ದರು ಎಂದರೆ ಸರಿ . ಎ ಸಿ ರವರು ನನ್ನ ಅಣ್ಣನ ಹೆಸರಿಗೆ ಆಗಿರುವ ಖಾತೆ ಕಾನೂನು ಬಾಹಿರ ಎಂದು ರದ್ದು ಮಾಡಿರುತ್ತಾರೆಂದರೆ ಗೊತ್ತಿಲ್ಲ. ನನ್ನ ಅಣ್ಣ ಸದರಿ ಖಾತೆ ರದ್ದು ಆದ ಮೇಲೆ ಡಿ ಸಿ ರವರ ಮುಂದೆ ಮೇಲ್ಮನವಿ ಸಲ್ಲಿಸಿರುವ ವಿಚಾರ ನನಗೆ ಗೊತ್ತಿರುತ್ತದೆ. ಡಿ ಸಿ ರವರ ಮುಂದೆ ಸದರಿ ಮೇಲ್ಮನವಿ ನಮ್ಮಂತೆ ಆಗಿರುತ್ತದೆ. ನಾನು ಡಿ ಸಿ ರವರು ಮಾಡಿರುವ ಆದೇಶವನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಏನು ಆದೇಶವಾಗಿರುತ್ತದೆ ಎಂದು ತಿಳಿದುಕೊಂಡಿರುವುದಿಲ್ಲ. ಡಿ ಸಿ ರವರ ಮುಂದೆ ಯಾವುದೇ ಆದೇಶವಾಗಿರುವುದಿಲ್ಲ, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಐಟಂ ನಂಬರ್ 14 ಹೊನ್ನಮಲ್ಲಯ್ಯ ನವರ ಕುಟುಂಬಕ್ಕೆ ಸೇರಿದ ಆಸ್ತಿ, ನನಗೂ ಮತ್ತು ಹೊನ್ನಮಲ್ಲಯ್ಯ ನವರ ಕುಟುಂಬಕ್ಕೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿ ಅವರ ಕುಟುಂಬಕ್ಕೆ ಸಂಬಂದ ಇರುವುದಿಲ್ಲ, ಸದರಿ ಆಸ್ತಿ ನಮ್ಮ ತಾತನಿಗೆ ಸೇರಿರುತ್ತದೆ. ಸದರಿ ಆಸ್ತಿ ಹೊನ್ನಮಲ್ಲಯ್ಯ ನವರ ಕುಟುಂಬಕ್ಕೆ ಸೇರಿರುತ್ತದೆ, ಅವರ ಆಸ್ತಿಯನ್ನು ಸೇರಿಸಿ ನಾನು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಐಟಂ ನಂಬರ್ 14 ರಲ್ಲಿ ಇರುವ ಆಸ್ತಿಗೂ ನಮ್ಮ ಕುಟುಂಬಕ್ಕೂ ಸಂಬಂದ ಇರುವುದಿಲ್ಲ ಎಂದರೆ ಸುಳ್ಳು. ಐಟಂ ನಂಬರ್ 14 ರಲ್ಲಿ ನಾನು ಮತ್ತು ನನ್ನ ಕುಟುಂಬದವರು ಸ್ವಾಧೀನದಲ್ಲಿರುವುದಿಲ್ಲ, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ನಮ್ಮ ಕುಟುಂಬದ ಸ್ವತ್ತು ಆಗಿರುವುದಿಲ್ಲ ಎಂದು ಗೊತ್ತಿದ್ದರೂ ನಾನು ಮೂಲ ದಾವೆ ಹಾಕಬೇಕಾದರೆ ಪ್ರತಿವಾದಿ 8 ರಿಂದ 12 ರವರನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಲಯದಲ್ಲಿ ಪ್ರತಿವಾದಿ 8 ರಿಂದ 12 ರವರನ್ನು ಪಕ್ಷಗಾರರನ್ನಾಗಿ ಅವರ ಆಸ್ತಿಯನ್ನು ದಾವೆಯಲ್ಲಿ ಸೇರಿಸಿ ಸುಳ್ಳು ದಾವೆಯನ್ನು ಹೂಡಿದ್ದೆ ಎಂದರೆ ಸರಿಯಲ್ಲ.

ನಾನು ಐಟಂ ನಂಬರ್ 14 ಕ್ಕೆ ಸಂಬಂದಪಟ್ಟ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ಎಲ್ಲ ದಾಖಲಾತಿಗಳನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿ 8 ರಿಂದ 12 ರವರು ಪಕ್ಷಗಾರರಾಗಿ ದಾವೆಯಲ್ಲಿ ಬಂದ ಮೇಲೆ ನಾನು ತಕರಾರು ಮಾಡಿರುವುದಿಲ್ಲ ಎಂದರೆ ಸಾಕ್ಷಿ ದಾವೆ ಇರುತ್ತದೆ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಮಾಗಡಿ**